


ಗೆಳೆಯ ಶ್ರೀರಾಮ್‌ಗೆ ಕರೆ ಮಾಡಿದ. ಶ್ರೀರಾಮ ಅದೇ ಊರಿನಲ್ಲಿ ಉಪನ್ಯಾಸಕನಾಗಿ ವಿಜ್ಞಾನ ಸಂಘ ಒಂದನ್ನು ನಡೆಸುತ್ತಿದ್ದನು. 'ಹಲೋ' ಎಂದ ಶ್ರೀರಾಮ್‌ಗೆ ಎಲ್ಲ ವಿಷಯವನ್ನು ಹೇಳಿ, 'ನನ್ನ ಜತೆಯಿರು. ನಾನೊಬ್ಬ ಅಧಿಕಾರಿಯಾಗಿದ್ದರೂ ಸ್ಥಳೀಯನೆಂದು ನನ್ನ ಬೆಂಬಲಕ್ಕಿರು. ಈ ಕೋಣ ಬಲಿ ಮತ್ತೆ ಗಾವು ಸಿಗಿಯುವುದು ಇವೆರಡನ್ನೂ ಹೇಗಾದರೂ ತಡೆಯೋಣ. ಈ ಊರ ಜಾತ್ರೆಯಲ್ಲಿ ಒಂದು ದಿನ ಬೆಳಗಿನ ಜಾವ ಕೋಣದ ಕರುಳು ಬಸಿದು ಅನ್ನದ ಜೊತೆ ಕಲಸಿ ಆಸಾದಿಯೊಬ್ಬನು ಕುಣಿಯುತ್ತಾ ಆ ಅನ್ನ ಬೆರೆತ ಹಸಿಮಾಂಸವನ್ನು ತಿನ್ನುತ್ತಾನಂತೆ. ಥೇ ಎಂತಾ ಮೌಢ್ಯ ಈ ಜನಕ್ಕೆ. ಅವನು ಆ ರೀತಿ ತಿನ್ನಲೇಬೇಕಂತೆ. ಅದು ಮಾರಮ್ಮನಿಂದ ದೊರೆತ ಒಂದು ಶಾಪ ಎನ್ನುತ್ತಾರೆ. ನಾನು ಬಂದು ಎರಡು ವರ್ಷವಾಯ್ತು. ಈ ಊರ ಮಾರಮ್ಮ ಈಗಲೇ ನಡೆಯುತ್ತಿರೋದು ರಾಮ್. ಹೇಗಾದರೂ ತಡೆಯಬೇಕು ಈ ಅಸಂಗತ ಪ್ರಾಣಿಬಲಿ ಮತ್ತು ಮನುಷ್ಯ ಶೋಷಣೆ' ಎಂದ.

'ನನಗೆ ನಿನ್ನ ಇಂಗಿತ ಅರ್ಥವಾಗತ್ತೆ. ಆದರೆ, ಇವೆಲ್ಲಾ ಕೈಮೀರಿ ಕಣ್ಣು ಮೀರಿ ನಡೆಯುತ್ತವೆ. ನಾನು ಯಾವಾಗಲೂ ನಿನ್ನ ಜತೆಯಾಗಿರುತ್ತೇನೆ. ವಿಜ್ಞಾನ ಸಂಘದಿಂದ ಒಂದು ಅರ್ಜಿ ಕೊಡುತ್ತೇನೆ. ಪ್ರಾಣಿ ದಯಾ ಸಂಘದಿಂದಲೂ ಒಂದು ಅರ್ಜಿ ಕೊಡಿಸುತ್ತೇನೆ. ಟೀವಿ ಚಾನಲ್‌ಗಳಿಗೆಲ್ಲ ಕರೆ ಮಾಡ್ತೀನಿ. ನೀವು ಎಂ.ಎಲ್.ಎ., ಮಿನಿಸ್ಟರ್ ಸುಬ್ರಮಣ್ಯರವರನ್ನು ಕಂಡು ಒಂದು ತೀರ್ಮಾನಕ್ಕೆ ಬನ್ನಿ. ಆದರೆ, ಜನರ ಮೌಢ್ಯ ಎಂದರೆ ಸಮಾಜವನ್ನು ಗಾವು ಹಿಡಿದಂತೆ. 'ಎಂದು ರಾಮ್ ಉತ್ತರಿಸಿದ.

'ಒಳ್ಳೆ ಪ್ರಯತ್ನ ಮಾಡೋಣ. ನಾನೂ ಒಂದಷ್ಟು ಜನರನ್ನ ಸೇರಿಸ್ತೀನಿ. ವಿಜ್ಞಾನದ ಶಿಕ್ಷಕರು ಮತ್ತು ವಿಚಾರವಂತರ ದಂಡು ನನ್ನ ಜತೆಯಿದೆ. ಮೊದಲು